# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಪುತ್ತೂರು ವಿಭಾಗ

## KARNATAKA STATE ROAD TRANSPORT CORPORATION

ವಿಭಾಗೀಯ ಕಛೇರಿ, ಮುಕ್ರುಂಪಾಡಿ, ಪುತ್ತೂರು. -574 202. Divisional Office, Mukrumpadi, PUTTUR -574 202

**ಸಂ:ಕರಾಸ:ಪುವಿ:ಸಂ:ವಾ/2127 /19-20** **ದಿನಾಂಕ: 19-11-2019**

**ಇ- ಟೆಂಡರ್ ಪ್ರಕಟಣೆ ಸಂ:05:2019-20:**

ಕ.ರಾ.ರ.ಸಾ.ನಿಗಮದ ಪುತ್ತೂರು ವಿಭಾಗದ ಈ ಕೆಳಗಿನ ಬಸ್ಸು ನಿಲ್ದಾಣಗಳ ವಾಣಿಜ್ಯ ಮಳಿಗೆಗಳನ್ನು ಉತ್ತೀರ್ಣರಾದ ಬಿಡ್ಡುದಾರರಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನಲ್ಲಿ ಸೂಚಿಸಿದ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಪ್ರತೀ ವರುಷ ಶೇ.10ರ ಹೆಚ್ಚಳದೊಂದಿಗೆ "ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿದೆಯೋ ಹಾಗೆಯೇ" ಶಾಶ್ವತ ಮಳಿಗೆಗಳಿಗೆ 05 ವರುಷದ ಅವಧಿಗೆ ಹಾಗೂ ತೆರೆದ ಮಳಿಗೆಗೆ 03 ವರುಷದ ಅವಧಿಗೆ ಪರವಾನಿಗೆ ನೀಡಲು ಉದ್ದೇಶಿಸಲಾಗಿದೆ.

| ಕ್ರ ಸಂ | ಬಸ್ಸು ನಿಲ್ದಾಣದ ಹೆಸರು | ವಾಣಿಜ್ಯ ಮಳಿಗೆಯ ವಿವರ/ವ್ಯವಹಾರ | ಕನಿಷ್ಟ ಮಾಸಿಕ ಪರವಾನಿಗೆ ಶುಲ್ಕ ರೂ. ಗಳಲ್ಲಿ | ಮಳಿಗೆಯ ಮಾದರಿ | ಖಾಲಿ ಆಗುವ ದಿನಾಂಕ | ಇಎಂಡಿ ಹಣ ರೂ. ಗಳಲ್ಲಿ | ಅರ್ಜಿ ಶುಲ್ಕ ರೂ.ಗಳಲ್ಲಿ (+ ಜಿಎಸ್‌ಟಿ) | ವಿಸ್ತೀರ್ಣ ಚದರ ಅಡಿಗಳಲ್ಲಿ | ಮೀಸಲಾತಿ |
|---|---|---|---|---|---|---|---|---|---|
| 1 | ಸುಬ್ರಹ್ಮಣ್ಯ (ಗ್ರಾಮಾಂತರ) | ಜನರಲ್ ಸ್ಟಾಲ್ ನಂ.5 (SCD-31) | 3638 | ತೆರೆದ ಸ್ಥಳ | ಖಾಲಿ ಇದೆ | 10914 | 118 | 100(OS) | ಸಾಮಾನ್ಯ |
| 2 | ಕುಶಾಲನಗರ | ಉಪಹಾರ ಗೃಹ 05 (SCD-86) | 118822 | ಶಾಶ್ವತ | ಖಾಲಿ ಇದೆ | 356466 | 1402 | 1659 | ಸಾಮಾನ್ಯ |
| 3 | ಮಡಿಕೇರಿ | ಜನರಲ್ ಸ್ಟಾಲ್ ನಂ.1 (SCD-68) | 2783 | ಶಾಶ್ವತ | ಖಾಲಿ ಇದೆ | 8349 | 118 | 325.22 | ಪ.ಜಾತಿ |
| 4 | ಕುಶಾಲನಗರ | ದ್ವಿಚಕ್ರ ತಂಗುದಾಣ (SCD-91) | 16844 | ತೆರೆದ ಸ್ಥಳ | ಖಾಲಿ ಇದೆ | 50532 | 198 | 4062.32 | ಸಾಮಾನ್ಯ |

ಇ-ಟೆಂಡರ್ ದಸ್ತಾವೇಜುಗಳನ್ನು/ ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ದಿನಾಂಕ:**20-11-2019** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಇ-ಟೆಂಡರ್ ಅರ್ಜಿ ಸಲ್ಲಿಕೆಗೆ ದಿನಾಂಕ:**08-12-2019**ರ ಸಮಯ 16:00 ಘಂಟೆಯ ವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ. ಇ-ಟೆಂಡರ್ ತೆರೆಯುವ ದಿನಾಂಕ: **10-12-2019 ಸಮಯ 12:00ಗಂಟೆಗೆ** (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ).

ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ನೊಂದಾಯಿತ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಅವಧಿ ಮುಗಿದ ನಂತರ ಹೊಸದಾಗಿ ಟೆಂಡರ್ ಪ್ರಕಟಣೆ ಹೊರಡಿಸಲಾಗುವುದು. ಮೇಲ್ಕಂಡ ಮಳಿಗೆಗಳಿಗೆ ಇ-ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು, ತಮ್ಮ ಲಿಖಿತ ಮನವಿಯೊಂದಿಗೆ ಸೂಚಿಸಿರುವ ಮಳಿಗೆಗೆ ನಿಗಧಿಪಡಿಸಿರುವ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ., ಮೊತ್ತಕ್ಕೆ ಪ್ರತ್ಯೇಕ ಡಿ.ಡಿ.ಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಪುತ್ತೂರು ವಿಭಾಗರವರ ಹೆಸರಿಗೆ ಪಡೆದು ದಿನಾಂಕ:**10-12-2019** ರ 12:00 ಗಂಟೆಯೊಳಗಾಗಿ ಕಛೇರಿ ಅವಧಿಯಲ್ಲಿ ಸಲ್ಲಿಸುವುದು. ತಡವಾಗಿ ಬಂದ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಅರ್ಜಿ ಶುಲ್ಕ ಮತ್ತು ಇ.ಎಂ.ಡಿ., ಡಿ.ಡಿ.ಯನ್ನು ಹಾಗೂ ಟೆಂಡರ್ ನಿಂಬಧನೆಗಳಲ್ಲಿ ತಿಳಿಸಿರುವಂತೆ ಇನ್ನಿತರ ದಾಖಲಾತಿಗಳನ್ನು ನಿಗಧಿತ ದಿನಾಂಕದೊಳಗಾಗಿ ಸಲ್ಲಿಸದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಪುತ್ತೂರು ವಿಭಾಗ, ಮುಕ್ರುಂಪಾಡಿ, ಪುತ್ತೂರು ವಿಭಾಗದ ದೂರವಾಣಿ ಸಂಖ್ಯೆ **7760990982/7259953323** ನ್ನು ಕಛೇರಿ ವೇಳೆ(ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ರವರೆಗೆ)ಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಇ-ಟೆಂಡರ್ ಪ್ರಕಟಣೆಯಲ್ಲಿ ಅರ್ಜಿಗಳನ್ನು ಪುರಸ್ಕರಿಸುವ/ತಿರಸ್ಕರಿಸುವ/ಮಾರ್ಪಾಡು ಮಾಡುವ/ರದ್ದುಪಡಿಸುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ ಪುತ್ತೂರು ವಿಭಾಗ

Janardhan

ಪ್ರತಿಯನ್ನು ವಂದನೆಗಳೊಂದಿಗೆ, ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ), ಕರಾರಸಾಸಂಸ್ಥೆ, ಕೇಂದ್ರ ಕಛೇರಿ ಬೆಂಗಳೂರು ಇವರ ಅವಗಾಹನೆಗೆ ಕಳುಹಿಸಲಾಗಿದೆ

ಪ್ರತಿಯನ್ನು ವಂದನೆಗಳೊಂದಿಗೆ ಎಲ್ಲಾ ಹಿರಿಯ/ವಿಭಾಗ ನಿಯಂತ್ರಣಾಧಿಕಾರಿ, ಕರಾರಸಾನಿ/ಈಕರಸಾನಿ/ ವಾಕರಸಾನಿ/ ಬೆಂಮಸಾನಿ ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಪ್ರತಿಯನ್ನು ವಿಭಾಗದ ಎಲ್ಲಾ ಘಟಕ ವ್ಯವಸ್ಥಾಪಕರು, ನಿಲ್ದಾಣ ಮೇಲ್ವಿಚಾರಕರು, ವಾಹನ ನಿಲ್ದಾಣ ಇವರಿಗೆ ಕಳುಹಿಸಿದೆ. ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಅಂಟಿಸಿ ಸಾರ್ವಜನಿಕರ ಗಮನಕ್ಕೆ ತರುವುದು ಹಾಗೂ ವ್ಯಾಪಕ ಪ್ರಚಾರ ಮಾಡುವುದು.

ಪ್ರತಿಯನ್ನು ವಿಭಾಗ ಸಂಚಾಲನಾಧಿಕಾರಿ/ಸಹಾಯಕ ಲೆಕ್ಕಾಧಿಕಾರಿ/ ಉಪಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ/ ಸಕಾನಿಅ/ಸಕಾನೂನು ಅಧಿಕಾರಿ, ಪುತ್ತೂರು ವಿಭಾಗ ಇವರ ಗಮನಕ್ಕೆ ಹಾಗೂ ದಿ:**10-12-2019** ರಂದು **12.00 ಗಂಟೆಗೆ** ಇ-ಪ್ರೊಕ್ಯೂರ್‌ಮೆಂಟ್ ಇ-ಟೆಂಡರ್ ಅರ್ಜಿ ತೆರೆಯುವ ಸಮಯದಲ್ಲಿ ಹಾಜರಿರುವುದು.

ಪ್ರತಿಯನ್ನು ಆಡಳಿತಾಧಿಕಾರಿ, ಕರಾರಸಾ.ನಿಗಮ, ಪುತ್ತೂರು ವಿಭಾಗ ಇವರ ಮಾಹಿತಿಗಾಗಿ ಕಳುಹಿಸುತ್ತಾ ಸದರಿ ಪ್ರಕಟಣೆಯನ್ನು ವಿಭಾಗ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಈ ಮೂಲಕ ಕಳುಹಿಸಲಾಗಿದೆ.

ಪ್ರತಿಯನ್ನು ವಿಭಾಗೀಯ ಭದ್ರತಾ ನಿರೀಕ್ಷಕರ ಗಮನಕ್ಕೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ ಹಾಗೂ ದಿನಾಂಕ:**10-12-2019** ರಂದು **12.00** ಗಂಟೆಗೆ ಇ-ಪ್ರೊಕ್ಯೂರ್‌ಮೆಂಟ್ ಇ-ಟೆಂಡರ್ ಅರ್ಜಿ ತೆರೆಯುವ ಸಮಯದಲ್ಲಿ ಹಾಜರಿರುವುದು.

ಪ್ರತಿಯನ್ನು :ವಿಭಾಗದ ಎಲ್ಲಾ ಸಂಚಾರ ನಿಯಂತ್ರಕರುಗಳ ಗಮನಕ್ಕೆ ಹಾಗೂ ಮೇಲಿನ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಸಾರ್ವಜನಿಕರ ಗಮನಕ್ಕೆ ತರುವುದು ಹಾಗೂ ಹೆಚ್ಚಿನ ಪ್ರಚಾರ ಮಾಡುವುದು.

ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾ.ನಿಗಮ::ಪುತ್ತೂರು ವಿಭಾಗ